# ಚಾಲುಕ್ಯ ಶೈಲಿಯ ಬಾಗಳಿ ಕಲ್ಲೇಶ್ವರ









ಚಿತ್ರ– ಲೇಖನ: **ಶ್ರೀಧರ ರಾಯಸಂ**

ದಾವಣಗೆರೆ ಜಿಲ್ಲೆಯ ಹರಪನಹಳ್ಳಿಗೆ 5 ಕಿ.ಮೀ. ದೂರವಿರುವ ಬಾಗಳಿ ಕಲ್ಲೇಶ್ವರ ದೇವಾಲಯ ಶಿಲ್ಪಕಲೆಯಿಂದ ಗಮನಸೆಳೆಯುವಂಥದು. ಬಾಗಳಿಯನ್ನು ಬಾಳ್ಗಲಿ ಎಂಬ ಹೆಸರಿನಿಂದ ಕರೆಯುತ್ತಿದ್ದರೆಂದು ಅಲ್ಲಿರುವ ಶಿಲಾಶಾಸನಗಳಿಂದ ತಿಳಿಯಬಹುದು. ಕಲ್ಯಾಣ ಚಾಲುಕ್ಯರು, ನಂತರ ಹೊಯ್ಸಳ, ವಿಜಯನಗರದ ಅರಸರು ಈ ಪ್ರಾಂತ್ಯದಲ್ಲಿ ತಮ್ಮ ಆಳ್ವಿಕೆ ಹೊಂದಿದ್ದರು ಎನ್ನುವ ಬಗ್ಗೆ ಚರಿತ್ರೆಯಲ್ಲಿ ಉಲ್ಲೇಖವಿದೆ.

ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಬಾಗಳಿ ಕಲ್ಲೇಶ್ವರ ದೇವಾಲಯ ನಿರ್ಮಾಣಗೊಂಡಿದೆ. ಸುತ್ತಲೂ ಹಸಿರು ಹೊಲಗಳು ಕಂಗೊಳಿಸುತ್ತಿದ್ದು, ದೊಡ್ಡ ಕೆರೆಯ ಬದಿಯಲ್ಲಿ ನಿರ್ಮಾಣಗೊಂಡ ವಿಶಾಲ ಆವರಣದ ಕಲ್ಲೇಶ್ವರ ದೇವಾಲಯದಲ್ಲಿ ಶಿಲ್ಪಿಗಳ ಸೃಜನಶೀಲತೆ, ಕಲಾವಂತಿಕೆ ಮನಸೂರೆಗೊಳ್ಳುತ್ತದೆ. ಭಾರತೀಯ ಪುರಾತತ್ವ ಇಲಾಖೆಯಿಂದ ಸಂರಕ್ಷಣೆಗೆ ಒಳಪಟ್ಟಿರುವ ಈ ದೇವಾಲಯದ ಆವರಣದಲ್ಲಿ, ಹಲವಾರು ಗುಡಿ ಮಂಟಪಗಳಿವೆ. ಕೆಲವು ಪುರಾತನ ಶಾಸನ, ವೀರಗಲ್ಲುಗಳನ್ನೂ ನೋಡಬಹುದು. ಚಾಲುಕ್ಯ ರಾಜ ಆಹವಮಲ್ಲನ ಆಳ್ವಿಕೆಯ ಕಾಲವಾದ 987ರಲ್ಲಿ ದುಗ್ಗಿಮಯ್ಯನೆಂಬಾತ ಈ ಕಲ್ಲೇಶ್ವರ ದೇಗುಲ ನಿರ್ಮಿಸಿದನು ಎಂದು ಉಲ್ಲೇಖವಿದೆ.

ಕಲ್ಲೇಶ್ವರ ದೇವಾಲಯದಲ್ಲಿ ಹಿಂಬದಿ ಪ್ರವೇಶವಿದೆ. ಭಿತ್ತಿ ಕಂಭ ಗೋಪುರ ರಚನೆ ಸರಳವಾಗಿದ್ದು, ಗೋಡೆಯ ಮೇಲಂಚಿನಲ್ಲಿ ಹಲವು ಶಿಲ್ಪಗಳು, ಕಾಮ–ಶಾಸ್ತ್ರದ ಭಂಗಿಯೊಂದಿಗೆ ಗೋಚರಿಸುತ್ತವೆ. ಎರಡು ಸಾಲುಗಳಲ್ಲಿ ಕೀರ್ತಿ ಮುಖಗಳೊಳಗೆ ಕಿರುಶಿಲ್ಪಗಳು ಕೆತ್ತನೆಗೊಂಡಿವೆ. ಆನೆ, ಕುದುರೆ, ಯಾಳಿ ಮತ್ತಿತರ ಪ್ರಾಣಿಗಳು, ನರ್ತಕ, ಭಕ್ತ, ವಾದ್ಯಗಾರ, ಅಶ್ವಾರೋಹಿ, ರತಿಮನ್ಮಥ, ಮಿಥುನ ಶಿಲ್ಪಗಳಿವೆ.

ಮುಖ್ಯ ದೇಗುಲದ ದ್ವಾರದಲ್ಲಿ ಗಜಲಕ್ಷ್ಮಿ, ತೋರಣದಲ್ಲಿ ದೇವತೆಗಳ ಸಾಲು ಒಂಭತ್ತು ಪಟ್ಟಿಕೆಯ ವಜ್ರ, ನಾಗನಾಗಿಣಿ, ಹೂಬಳ್ಳಿಗಳು, ನರ್ತಕ ವಾದ್ಯಗಾರರನ್ನು ಕೆತ್ತಿದ ಚಿತ್ರಣಗಳಿವೆ. ಕೆಲವು ವಿಗ್ರಹಗಳನ್ನು ಹತ್ತಿರವಿರುವ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಲಾಗಿದೆ. ಗರ್ಭಗುಡಿಯ ಹತ್ತಿರ ಸೊಗಸಾದ ತ್ರಿಮೂರ್ತಿಗಳ ಸಂಗಮವಿದೆ. ಮಕರ ತೋರಣದಲ್ಲಿ ಕೈಮುಗಿದು ಕುಳಿತ ಬ್ರಹ್ಮ, ವಿಷ್ಣು ನಡುವೆ ಅಂಧಕಾಸುರ ಸಂಹಾರ, ಗಜಾಸುರ ಸಂಹಾರ, ನರ್ತನಾಸಕ್ತ ಶಿವನ ರೂಪಗಳ ಕೆತ್ತನೆಗಳಿವೆ.

ಸೂಕ್ಷ್ಮ ಕೆತ್ತನೆಗಳುಳ್ಳ ಈ ಶಿಲಾ ವಿಗ್ರಹಗಳು ಮನ ಸೆಳೆಯುತ್ತವೆ. ಪಾಣೀ ಪೀಠದಲ್ಲಿ ಶಿವಲಿಂಗವಿದೆ. ನಿತ್ಯ ಪೂಜೆಯೂ ನಡೆಯುತ್ತದೆ. ದೇವಾಲಯದ ವಿಶಾಲವಾದ ಹೊರಮಂಟಪದಲ್ಲಿ ಅನೇಕ ಕಂಬಗಳು ನಕ್ಷತ್ರಾಕಾರದಲ್ಲಿ ನಿರ್ಮಾಣಗೊಂಡು ಕಂಗೊಳಿಸುವ ವಿನ್ಯಾಸ ಮನಕ್ಕೆ ಮುದ ನೀಡುತ್ತವೆ. ಕಂಬಗಳು, ಒಂದಕ್ಕಿಂತ ಒಂದು ಪೈಪೋಟಿಯಂತೆ ವಿನ್ಯಾಸಗೊಂಡಿವೆ. ನರ್ತಕಿಯರನ್ನು ಮತ್ತು ದೇವತೆಗಳನ್ನು ಕೆತ್ತಲಾಗಿದೆ. ಮಂಟಪದಲ್ಲಿ ಗರ್ಭಗುಡಿಗೆ ಅಭಿಮುಖವಾಗಿ, ಸಾಲಂಕೃತ ಬೃಹತ್ ನಂದಿ ವಿಗ್ರಹವಿದೆ.

ಎಡಭಾಗದಲ್ಲಿ ನರಸಿಂಹ ದೇವರ ಗುಡಿಯಿದೆ. ದ್ವಾದಶ ಭುಜಗಳ, ಎಂಟು ಕೈಗಳಲ್ಲಿ ಆಯುಧಗಳನ್ನು ಧರಿಸಿದ ಉಗ್ರ ನರಸಿಂಹ ದೇವರು, ಹಿರಣ್ಯಕಶಿಪುವನ್ನು ಎರಡೂ ಕೈಗಳಿಂದ ತೊಡೆಯ ಮೇಲಿಟ್ಟುಕೊಂಡು ದೇಹವನ್ನು ಬಗೆಯುವ ದೃಶ್ಯ ಅಪೂರ್ವ. ಅತ್ಯಂತ ಸೂಕ್ಷ್ಮ ಕೆತ್ತನೆಯ ಕುಸುರಿ ಕೆಲಸವನ್ನು ನರಸಿಂಹದೇವರ ಬೆರಳು, ಉಗುರುಗಳಲ್ಲಿ ಗಮನಿಸಬಹುದು. ಮತ್ತೊಂದು ಗರ್ಭಗುಡಿಯಲ್ಲಿ ಸೂರ್ಯದೇವರ ವಿಗ್ರಹವನ್ನು ಕಾಣಬಹುದು. ಗಂಧರ್ವ ನರ್ತಕರು, ಗಾಯಕರು, ಉಬ್ಬು ಶಿಲ್ಪಗಳ ವಿಗ್ರಹಗಳು ಗಮನ ಸೆಳೆಯುತ್ತವೆ.